ಜವಾಬ್ದಾರಿ ಹೆಚ್ಚಾಗಿದೆ. ನೀನೊಮ್ಮೆ ಬುಲೆಟ್ ಮೆಟ್ರೋ ಕಮೀಷನರ್‌ರವರೊಂದಿಗೆ ಮಾತನಾಡು. ವಿಷಯ ಸ್ಪಷ್ಟವಾದೀತು.' ಅನಘಾ ಮಾತು ತುಂಡರಿಸಿದ್ದಳು.

ಹನ್ನಾ ತನ್ನ ಮಾತುಕತೆಯನ್ನು ಬುಲೆಟ್ ಮೆಟ್ರೋ ಕಮೀಷನರ್‌ರಾದ ಶಮಿತವ್‌ರವರ ಲೈನ್‌ನಲ್ಲಿ ಮುಂದುವರಿಸಿದಳು.

'ಸರ್, ಈಗಷ್ಟೇ ಕಂಟ್ರೋಲ್ ರೂಮ್‌ನಿಂದ ಕರ್ತವ್ಯಗಳನ್ನು ಹಂಚಿಕೆ ಮಾಡಲಾಯಿತು. ನಾನು ಹೊರ ವಲಯದಲ್ಲಿರುವುದರಿಂದ, ನನ್ನ ಕರ್ತವ್ಯವೇನೆಂದು ಸ್ಪಷ್ಟಪಡಿಸಲು ಕೋರಿದೆ.'

ಕಮೀಷನರ್ ಶಮಿತವ್ ತಮ್ಮ ಮೇಲಿದ್ದ ಗುರುತರ ಜವಾಬ್ದಾರಿಯ ಬಗ್ಗೆ ತಿಳಿದವರೇ ಕೆಲಸದ ಹಂಚಿಕೆಯಲ್ಲಿ ತೊಡಗಿದ್ದರು. ಅಷ್ಟೇ ಸುಲಲಿತವಾಗಿ ಕೆಲಸ ಕಾರ್ಯಗಳು ನಡೆಯಬೇಕೆಂದು ಆಶಿಸಿದ್ದವರು.

'ಇದೊಂದು ದಿಢೀರ್ ಬೆಳವಣಿಗೆ ಹನ್ನಾ. ಮೇಲಿನಿಂದ ಆದೇಶ ಬಂದಿರುವುದರಿಂದ, ಅದನ್ನು ಪಾಲನೆ ಮಾಡಲೇಬೇಕಾದ ಪರಿಸ್ಥಿತಿ ಬಂದಿದೆ. ನಿನ್ನ ಮೇಲೊಂದು ಗುರುತರವಾದ ಜವಾಬ್ದಾರಿಯೊಂದನ್ನು ಹೊರಿಸುತ್ತಿದ್ದೇನೆ. ಈಗಾಗಲೇ ನಿನಗೆ ವಿಷಯವೇನೆಂದು ತಿಳಿದಿರಬೇಕು. ಕೆಲಸದ ಹಂಚಿಕೆಯಲ್ಲಿ ಸಮಯ ಪೋಲಾಗಬಾರದೆಂದು ಯಾರ್‍ಯಾರು ಎಲ್ಲೆಲ್ಲಿ ಈ ದಿನ ಕರ್ತವ್ಯ ನಿರ್ವಹಿಸಿದರೋ ಅಲ್ಲಲ್ಲೇ ಅವರಿಗೆ ಕರ್ತವ್ಯ ಹಂಚಿಕೆ ಮಾಡಲಾಗಿದೆ.'

'ಅರ್ಥವಾಯಿತು ಸರ್. ನಾನು ನಗರ ಪ್ರವೇಶ ಹಾಗೂ ನಿರ್ಗಮನ ದ್ವಾರದ ಬಳಿ ಕಾರ್ಯ ನಿರ್ವಹಿಸಿದ್ದೇನೆ. ಇಲ್ಲಿ ಕೆಳಗೆ ಬುಲೆಟ್ ಮೆಟ್ರೋ ನಿಲ್ದಾಣ ಹಾಗೂ ಮೇಲೆ ರಸ್ತೆಯ ಟೋಲ್ ದ್ವಾರಗಳಿದ್ದು, ಎರಡೂ ಕಡೆಯಿಂದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುವುದಿದೆ. ಅರೆಮಾನವರನ್ನು ಯಾವ ರೀತಿ ಗಡೀಪಾರು ಮಾಡಲಾಗುತ್ತಿದೆ ಮತ್ತು ಅವರ ಸಂಖ್ಯೆ ಮುಂತಾದ ವಿಚಾರ ತಿಳಿಸಿದರೆ ಅದರಂತೆ ನಾನು ಸನ್ನದ್ಧಳಾಗಬಹುದು.'

'ನೀನು ಈ ಪ್ರಶ್ನೆ ಕೇಳಿದ್ದು ಒಳ್ಳೆಯದಾಯಿತು. ಅವರನ್ನು ಗಡಿಪಾರು ಮಾಡುವ ಸಂದರ್ಭದಲ್ಲಿ ಯಾವುದೇ ಬಾಧಕಗಳು ಎದುರಾಗಬಾರದೆಂದು ಅವರನ್ನು ಮೆಟ್ರೋ ಮಾರ್ಗವಾಗಿ ಕಳುಹಿಸಿಕೊಡಲಾಗುತ್ತಿದೆ. ಅನ್ಯ ರಾಜ್ಯಗಳಿಂದ ಬಂದವರಿಗೆ ಬೇರೆ ವ್ಯವಸ್ಥೆ ಮಾಡಿದ್ದೇವೆ. ನೀನೀಗ ಹೊರವಲಯದಲ್ಲಿ ಇರುವುದರಿಂದ, ಪಕ್ಕದ ನಗರಕ್ಕೆ ಸಂಬಂಧಪಟ್ಟ ಸುಮಾರು ಒಂದು ಸಾವಿರ ಮಂದಿಯನ್ನು ಮೆಟ್ರೋದಲ್ಲಿ ಕಳುಹಿಸಿಕೊಡಲಿದ್ದೇವೆ. ಅವರು ಮೆಟ್ರೋದಿಂದ ಇಳಿದೊಡನೆಯೇ ಮೇಲಕ್ಕೆ ಬಂದು ಟೋಲ್ ದಾಟಿ ಹೊರಹೋಗಬೇಕಾಗುತ್ತದೆ. ಅಲ್ಲೇ ನೀನು ಅವರನ್ನು ಸುರಕ್ಷಿತವಾಗಿ ಗಡಿ ದಾಟಿಸಬೇಕಾಗುತ್ತದೆ. ಅವರು ಆ ಜಾಗದಲ್ಲಿ ಮತ್ತೆ ಒಳ ಪ್ರವೇಶಿಸಲು ಪ್ರಯತ್ನಿಸಬಹುದು. ನೀವು ಅದನ್ನು ತಡೆಯಬೇಕು.'

'ಸರ್, ಅವರನ್ನು ಗಡಿಪಾರು ಮಾಡಲು ಕೆಲವು ಅಧಿಕಾರಿಗಳನ್ನು ಈಗಾಗಲೇ ನಿಯೋಜಿಸಿರಬೇಕು. ಅವರು ಜೊತೆಗಿರುವರಲ್ಲವೇ?'

'ಹೌದು. ಸಶಸ್ತ್ರ ಅಧಿಕಾರಿಗಳನ್ನು ಅವರೊಂದಿಗೆ ಕಳುಹಿಸಿಕೊಡಲಿದ್ದೇವೆ.'

ವಿಷಯ ಅರಿತ ಹನ್ನಾ ಅಂದು ಮನೆಗೆ ಹೋಗುವ ವಿಚಾರ ಮುಂದೂಡಿ ಗಡಿ ದ್ವಾರದಲ್ಲಿ ನಿಂತಳು. ಸಾಧಾರಣ ದಿನಗಳಲ್ಲಿಯಂತೆ ವಾಹನಗಳ ಓಡಾಟ ಎಂದಿನಂತಿತ್ತು. ಜನರಿಗೆ ಈ ಗಡಿಪಾರಿನ ವಿಚಾರ ತಿಳಿದಿದೆಯೋ ಇಲ್ಲವೋ. ಮಾಧ್ಯಮಗಳಲ್ಲೂ ಈ ಸುದ್ದಿ ಬಿತ್ತರವಾಗಲಿಲ್ಲವಾದ್ದರಿಂದ ಇದೊಂದು ದಿಢೀರ್ ಕ್ರಮವೆಂದು ಊಹಿಸಿದಳು.

ನೆಲದ ಕೆಳಗೆ ಆಗಾಗ ಕೊಂಚ ಕಂಪನ ಉಂಟಾದಾಗಲೆಲ್ಲಾ ಮೆಟ್ರೋ ವಾಹನದ ಚಲನೆಯಿಂದಿರಬೇಕೆಂದು ಊಹಿಸಿ ಎಂ.ಪಿ. ವಾಕಿಯಲ್ಲಿನ ಅದರ ಓಡಾಟದ ಸಮಯದ ಕಡೆ ಅವಳ ದೃಷ್ಟಿ ಹೊರಳುತ್ತಿತ್ತು. ಅರೆಮಾನವ ಪಡೆಯು ಮೆಟ್ರೋದಲ್ಲಿ ಸಾಗಿಸುವಾಗ ಬಹು ಎಚ್ಚರಿಕೆಯಿಂದ ಹಿಂದೆ ಹಾಗೂ ಮುಂದೆ ಭದ್ರತಾ ರೊಬೋ ಕಾಪ್‌ಗಳನ್ನು ನಿಯೋಜಿಸುವುದರಿಂದ ಯಾವುದೇ ಅವಘಡಗಳಿಗೆ ಅವಕಾಶವಿರುವುದಿಲ್ಲವೆಂಬ ಧೈರ್ಯವಿದ್ದರೂ ಅವರನ್ನು ಅವೇಳೆಯಲ್ಲಿ ಸಾಗಿಸುತ್ತಿದ್ದರಿಂದಲೋ ಅಥವಾ ರಾತ್ರಿಯ ಕಪ್ಪಿನ ನಡುವೆ ಝಗಮಗಿಸುವ ಕಣ್ಣು ಕುಕ್ಕುವಂತಹ ದೀಪಗಳ ಬೆಳಕಿನಿಂದಲೋ ಏನೋ... ಯಾವುದೋ ಅಸಹಜ ಕ್ರಿಯೆಗೆ ಇದು ಆಸ್ಪದ ನೀಡದಿರಲಿ ಎಂದು ಮನಸ್ಸು ಹಾರೈಸಿತ್ತು.

ಅವಳ ಎಂ.ಪಿ. ವಾಕಿಯಲ್ಲಿ ನಿರ್ದಿಷ್ಟ ಸಮಯಕ್ಕೆ ಆಗಮಿಸುವ ಮೆಟ್ರೋ ಸಂಚಾರದ ವಿವರ ಮೂಡಿಬರುತ್ತಿದ್ದು, ಮೆಟ್ರೋ ಒಳಗಿನ ದೃಶ್ಯಗಳೂ ಕಣ್ಗಾವಲು ಕ್ಯಾಮೆರಾದಲ್ಲಿ ಸೆರೆಯಾಗಿದ್ದವು. ಬಹುಶಃ ಈ ವ್ಯವಸ್ಥೆ ಅವಶ್ಯಕವಿದ್ದೆಡೆ ಕಾರ್ಯಾಚರಣೆಗೆ ಸಹಾಯಕವಾಗಿತ್ತು.

ಕೆಲವೇ ಹೊತ್ತಿಗೆ ಇನ್ನೇನು ಅರೆಮಾನವ ಪಡೆಯನ್ನು ಬುಲೆಟ್ ಮೆಟ್ರೋದಲ್ಲಿ ಹತ್ತಿಸಬೇಕೆಂದು ಕಮಾಂಡೋ ಪಡೆಯ ಮುಖ್ಯಸ್ಥ ಆಜ್ಞೆ ಹೊರಡಿಸುತ್ತಿದ್ದಂತೆಯೇ ಅರೆಮಾನವ ಪಡೆಯ ಸದಸ್ಯರಲ್ಲಿ ಹಾಹಾಕಾರವೆದ್ದಿತ್ತು.

'ಇದೇನು ನಮ್ಮನ್ನು ಕುರಿಮಂದೆಯಂತೆ ತುಂಬಿಸುತ್ತಿದ್ದೀರಿ. ನಾವು ಮನುಷ್ಯರೆಂಬುದನ್ನು ಮರೆಯದಿರಿ' ಎಂದು ಒಬ್ಬಾತ ಭದ್ರತಾ ಪಡೆಯ ಮುಖ್ಯಸ್ಥನ ಮೇಲೆ ಕಿಡಿಕಾರಿದ್ದ.

'ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇವೆ. ನಿಮ್ಮನ್ನು ಗಡಿಪಾರು ಮಾಡಬೇಕೆಂಬ ಆಜ್ಞೆ ಹೊರಡಿಸಲಾಗಿರುವುದರಿಂದ ನೀವು ನಮ್ಮ ಕೆಲಸ ಮಾಡಲು ಸಹಕಾರ ನೀಡಬೇಕು. ಹೇಗೂ ನಾವು ನಿಮ್ಮನ್ನು ಬೇರೆ ಅಪರಿಚಿತ ಊರುಗಳಿಗೆ ಕಳುಹಿಸುತ್ತಿಲ್ಲವಲ್ಲ. ವಾಪಸ್ಸು ನಿಮ್ಮ ಊರಿಗೆ ಕಳುಹಿಸುತ್ತಿದ್ದೇವೆ.'

'ನಮ್ಮ ಹಕ್ಕುಗಳನ್ನು ನೀವು ಕಸಿಯುತ್ತಿದ್ದೀರಿ. ನಾವೇನು ದರೋಡೆಕೋರರೇ... ಉಗ್ರಗಾಮಿಗಳೇ... ಮನುಷ್ಯತ್ವವೇ ಇಲ್ಲವಲ್ಲ ನಿಮಗೆ. ನಿಮಗೂ ಈ ರೊಬೋ ಕಾಪ್‌ಗಳಿಗೂ ವ್ಯತ್ಯಾಸವೇ ಕಾಣ್ತಿಲ್ಲ...' ಅವರ ಉದ್ರೇಕಕಾರಿ ಮಾತುಗಳು ಮುಖ್ಯಸ್ಥ ತಾಳ್ಮೆಯನ್ನು ಪರೀಕ್ಷೆ ಮಾಡುವಂತಿದ್ದವು. ತಮ್ಮನ್ನು ರೊಬೋ ಕಾಪ್‌ಗಳಿಗೆ ಹೋಲಿಸಿದ್ದು ಅಧಿಕಾರಿಗೆ ಇರುಸುಮುರಿಸು ತರಿಸಿತ್ತು.

'ಸಾಕು ನಿಮ್ಮ ಮಾತುಗಳು. ನೀವು ಹೀಗೆಯೇ ವಾದ ಮಾಡುತ್ತಿದ್ದರೆ ನಾವು ಫೋರ್ಸ್ ಬಳಸಬೇಕಾದೀತು' ಎಂದು ಎಚ್ಚರಿಸಿದರು. ಆದರೆ ಅವರ ಮಾತುಗಳನ್ನು ಅರೆಮಾನವ ಪಡೆಯ ಸದಸ್ಯರು ಕೇಳಲೇ ಒಲ್ಲರು! ಅವರು ನಿಲ್ದಾಣದೊಳಗೆ ಹೋಗಲು ನಿರಾಕರಿಸಿ ಹೊರಹೋಗಲು ಪ್ರಯತ್ನಿಸಿದ್ದರೆ ರೊಬೋ ಕಾಪ್‌ಗಳು ಅವರನ್ನು ಮೆಟ್ರೋ ಒಳಗೆ ದಬ್ಬುವುದು ತದ್ವಿರುದ್ಧ ಕ್ರಿಯೆಯಾಗಿತ್ತು. ಎರಡೂ ಕಡೆಯ ಬಲಾಬಲ ಹೋರಾಟದ ನಡುವೆ ರೊಬೋ ಕಾಪ್‌ಗಳು ಅರೆಮಾನವ ಪಡೆಯ ಸದಸ್ಯರನ್ನು ಬುಲೆಟ್ ಮೆಟ್ರೋ ಒಳಗೆ ದಬ್ಬುವಲ್ಲಿ ಕೊನೆಗೂ ಯಶಸ್ವಿಯಾಗಿದ್ದರು.

ಕಮಾಂಡೋ ಪಡೆಯ ಮುಖ್ಯಸ್ಥ ಹಸಿರು ನಿಶಾನೆ ತೋರಿಸಿ, ಆಜ್ಞೆ ಹೊರಡಿಸಿದ ನಂತರವಷ್ಟೇ ಮೆಟ್ರೋ ತನ್ನ ಬಾಗಿಲುಗಳನ್ನು ಭದ್ರಪಡಿಸಿಕೊಂಡು ವೇಗದಿಂದ ನಡುವೆ ಯಾವುದೇ ತಡೆಯಿಲ್ಲದೆ ತನ್ನ ಗಮ್ಯಸ್ಥಾನಕ್ಕೆ ತೆರಳಿತ್ತು. ಮುಖ್ಯ ನಿಲ್ದಾಣದಲ್ಲಾಗುತ್ತಿದ್ದ ಬದಲಾವಣೆಗಳು ಇತರೆಡೆ ನಿಯೋಜಿಸಲಾಗಿದ್ದ ವಾರ್ಡನ್‌ಗಳಿಗೂ ರಿಯಲ್ ಟೈಮ್‌ನಲ್ಲಿ ರವಾನೆಯಾಗುತ್ತಿದ್ದು, ಎಲ್ಲರನ್ನೂ ಎಚ್ಚರಿಕೆಯಿಂದ ತಮ್ಮ ತುದಿಗಾಲ ಮೇಲೆ ನಿಲ್ಲುವಂತೆ ಮಾಡಿತ್ತು. ಮೆಟ್ರೋ ಮಿಂಚಿನಂತೆ ಹೊರವಲಯ ತಲುಪುವ ಮುನ್ನವೇ ಹನ್ನಾ ಮುಖ್ಯದ್ವಾರವನ್ನು ಹೊರತುಪಡಿಸಿ ಇತರೆ ದ್ವಾರಗಳನ್ನು ಭದ್ರಪಡಿಸಿದ್ದಳು. ಕೆಲವೇ ಕ್ಷಣಗಳಲ್ಲಿ ಒಂದು ದೊಡ್ಡ ಅಲೆ ಅಪ್ಪಳಿಸಿದಂತೆ ಒಮ್ಮೆಲೇ ಮೆಟ್ರೋ ಹೊರವಲಯದಲ್ಲಿ ನಿಲುಗಡೆಯಾಗುತ್ತಿದ್ದಂತೆಯೇ ಅರೆಮಾನವ ಪಡೆಯ ಗುಂಪು ಹೊರನುಗ್ಗಿತ್ತು. ಎಷ್ಟಾದರೂ ಮನುಷ್ಯ ಸ್ವಾತಂತ್ರ್ಯವನ್ನು ಅಪೇಕ್ಷಿಸುವ ಜೀವಿಯಲ್ಲವೇ?

ಭದ್ರತಾಪಡೆಯ ಕಬಂಧ ಬಾಹುಗಳಿಂದ ಬಿಡುಗಡೆ ಹೊಂದಿ ಹೊರ ಬಂದರೆ ಸಾಕು ಎಂಬಂತೆ ನುಗ್ಗುವುದನ್ನು ನೋಡಿದ ಭದ್ರತಾಪಡೆಯ ಮುಖ್ಯಸ್ಥನಿಗೆ ಈ ಹಿಂದೆ ಅವರುಗಳು ಮೆಟ್ರೋ ಹತ್ತಲು ಪ್ರತಿಭಟಿಸಿದ್ದು ಕನಸಿನಂತೆ ತೋರಿತ್ತು. ಯಾವುದೇ ಉಚ್ಚಾಟನೆಯು ಮನುಷ್ಯನ ವಾಸಸ್ಥಳದಿಂದ ಕಿತ್ತೊಗೆಯುವುದೆಂದರೆ ಮೂಲ ಬೇರುಗಳಿಂದ ಸಂಬಂಧವನ್ನು ತೊರೆದಂತೆಯೇ. ಆದರೆ ಈಗಿನ ಸಂದರ್ಭದಲ್ಲಿ ಅವರು ತಮ್ಮ ವಾಸಸ್ಥಳಕ್ಕೆ ಹಿಂದಿರುಗುತ್ತಿದ್ದರಿಂದ ಪರಿಸ್ಥಿತಿ ಭಿನ್ನವಾಗಿತ್ತು. ಅವರ ನೂಕುನುಗ್ಗಲಿನ ಮಧ್ಯೆ ಹನ್ನಾಳಿಗೆ ನಿಯೋಜಿಸಲಾದ ಒಂದು ಕಮಾಂಡೋ ರೊಬೋ ಪಡೆ ಹರಸಾಹಸದೊಂದಿಗೆ ಅರೆಮಾನವ ಪಡೆಯ ಸದಸ್ಯರನ್ನು ಸಾಲುಸಾಲಾಗಿ ನಿಲ್ಲಿಸಲು ಪ್ರಯತ್ನಿಸಿತ್ತಾದರೂ ಅದು ಅವರ ಶಕ್ತಿಯನ್ನು